# 3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

***Spl.C.No.205/2018***

PW.2
CW.1

ದಿನಾಂಕಃ 19-07-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಹೆಸರುಃ ವೆಂಕಟೇಶಪ್ಪ

ತಂದೆಯ ಹೆಸರುಃ ಕೊಲ್ಲಪ್ಪ

ವಯಸ್ಸುಃ 49 ವರ್ಷ

ವೃತ್ತಿಃ ರಿಯಲ್ ಎಸ್ಟೇಟ್ ವ್ಯಾಪಾರ

ವಾಸಸ್ಥಳಃ ಬೆಂಗಳೂರು

**ಮುಖ್ಯ ವಿಚಾರಣೆಃ ಸರ್ಕಾರಿ** ಅಭಿಯೋಜಕ**ರಿಂದ**

ಚಾಸಾಃ 2 ನನ್ನ ಪತ್ನಿ, ಚಾಸಾಃ 3 ಮತ್ತು 4 ಗೊತ್ತಿಲ್ಲ. ಅವರು ಮಹಜರ್ ವೇಳೆ ಹಾಜರಿದ್ದರು. ನಾನು ಬೆಂಗಳೂರಿನಲ್ಲಿ ರಿಯಲ್ ಎಸ್ಟೇಟ್ ಕೆಲಸ ಮಾಡುತ್ತೇನೆ. ನನಗೆ ಸ್ವಂತ ಕೆಲಸದ ಕಚೇರಿ ಇಲ್ಲ. ನಾನು ಕಳೆದ 25 ವರ್ಷಗಳಿಂದ ರಿಯಲ್ ಎಸ್ಟೇಟ್ ಕೆಲಸ ಮಾಡುತ್ತಿದ್ದೇನೆ. ನನಗೆ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೊಡಲ ಅಗ್ರಹಾರ ಗ್ರಾಮದ ನಿವಾಸಿ 7 ನೇ ಆರೋಪಿ ಸುರೇಶ ನನಗೆ 10 ವರ್ಷಗಳಿಂದ ಸ್ನೇಹಿತ. ಗೌರಮ್ಮ ನನಗೆ ಗೊತ್ತಿಲ್ಲ. ನಾನು ಬೋವಿ ಜಾತಿಗೆ ಸೇರಿದವನು. 1 ರಿಂದ 7 ನೇ ಅರೋಪಿಗಳು ಲಿಂಗಾಯತ ಜಾತಿಗೆ ಸೇರಿದವರು.

2. 7 ನೇ ಆರೋಪಿ ಸುರೇಶ ನನಗೆ ಫೋನ್ ಮಾಡಿ ಗೌರಮ್ಮನವರಿಗೆ ಎರಡು ಲಕ್ಷ ಹಣ ಸಾಲವಾಗಿ ಬೇಕು ಎಂದು ನನ್ನನ್ನು ಕೇಳಿದರು. ಸುರೇಶ ನನಗೆ ಗೌರಮ್ಮನವರ 8 ಎಕರೆ ಜಮೀನಿಗೆ ಸಂಬಂದಿಸಿದ ಜೆರಾಕ್ಸ್ ಪ್ರತಿಯ ದಾಖಲಾತಿಗಳನ್ನು ಕೊಡುತ್ತಾರೆ ಸಾಲವಾಗಿ 2 ಲಕ್ಷ ಕೊಡುವಂತೆ ಕೇಳಿದರು. ನಾನು ಜೆರಾಕ್ಸ್ ಪ್ರತಿಗಳ ದಾಖಲಾತಿಗಳ ಅದಾರದಲ್ಲಿ ಸಾಲ ಕೊಡುವುದಿಲ್ಲ ಎಂದು ಹೇಳಿದೆ. ಸುರೇಶ ತನ್ನ ಖಾತೆಯ ಪಾಸ್ ಪುಸ್ತಕ ಹಾಗೂ ಚೆಕ್ ಬುಕ್ ಕೊಡುತ್ತೇನೆ ಅದರ ಆಧಾರದ ಮೇಲೆ ಎರಡು ಲಕ್ಷ ಹಣ ಸಾಲವಾಗಿ ಕೊಡುವಂತೆ ಕೇಳಿದರು. ನಾನು ಅದಕ್ಕೆ ಒಪ್ಪಿದ್ದೆ.

3. ಅದಾದ ಎರಡು ದಿವಸಗಳ ನಂತರ ನಾನು ಎರಡು ಲಕ್ಷ ಹಣದೊಂದಿಗೆ ತುಮಕೂರು ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣಕ್ಕೆ ಬಂದಿದ್ದೆ. 1 ನೇ ಆರೋಪಿ ಗೌರಮ್ಮ, 3 ನೇ ಅರೋಪಿ ಅವಿನಾಶ, 7 ನೇ ಅರೋಪಿ ಸುರೇಶ ತುಮಕೂರು ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣಕ್ಕೆ ಬಂದಿದ್ದರು ಆಗ ನನಗೆ 1 ನೇ ಅರೋಪಿ ಗೌರಮ್ಮ ಮತ್ತು 3 ನೇ ಅರೋಪಿ ಅವಿನಾಶ ನನಗೆ ಪರಿಚಯವಾದರು. 3 ನೇ ಆರೋಪಿ 1 ನೇ ಆರೋಪಿಯ ಮಗ. 1, 3 ಮತ್ತು 7 ನೇ ಆರೋಪಿಗಳು ನನ್ನಿಂದ 2 ಲಕ್ಷ ಹಣ ಪಡೆಯುವಾಗ 6 ತಿಂಗಳ ಒಳಗೆ ಹಣ ವಾಪಸ್ಸು ಕೊಡುತ್ತೇವೆ ಎಂದು ಹೇಳಿದರು, ನಾನು ಹಣ ಕೊಟ್ಟಿದ್ದೆ. 7 ನೇ ಆರೋಪಿಯ ಪಾಸ್ ಪುಸ್ತಕ ಮತ್ತು ಚೆಕ್ ನ್ನು ಪಡೆದು ನಾನು ಬೆಂಗಳೂರಿಗೆ ಹೋಗಿದ್ದೆ.

4. ಕರ್ನಾಟಕ ಬ್ಯಾಂಕ್ ವಡೇರಹಳ್ಳಿ ಬ್ರಾಂಚ್ ಬೆಂಗಳೂರಿನ ನನ್ನ ಖಾತೆಗೆ 1 ಲಕ್ಷದ 10 ಸಾವಿರ ರೂಗಳನ್ನು ಜಮೆ ಮಾಡಿದ್ದರು. 6 ತಿಂಗಳ ನಂತರ ಸುಮಾರು ಒಂದೂವರೆ ವರ್ಷಗಳ

ವರೆಗೆ ಸದರಿ ಹಣವನ್ನು ನನ್ನ ಖಾತೆಗೆ ಜಮಾ ಮಾಡಿರುತ್ತಾರೆ. ಉಳಿದ 90 ಸಾವಿರ ಹಣ ನನಗೆ ಮರು ಪಾವತಿ ಮಾಡಬೇಕಾಗಿರುತ್ತದೆ. ನಾನು 7 ನೇ ಆರೋಪಿಗೆ ಸುಮಾರು 2-3 ತಿಂಗಳು ನನ್ನ ಹಣ ವಾಪಸ್ಸ ಕೊಡಿಸುವಂತೆ ಪೋನ್ ಮುಖಾಂತರ ಕೇಳುತ್ತಿದ್ದೆ. ದಿನಾಂಕಃ 24-2-2018 ರಂದು 1 ನೇ ಆರೋಪಿ ಗೌರಮ್ಮ ನನಗೆ ಪೋನ್ ಮಾಡಿ ನೀವು ಮತ್ತು 7 ನೇ ಆರೋಪಿ ಸುರೇಶ ಜಗಳ ಮಾಡಿಕೊಳ್ಳಬೇಡಿ ನಮ್ಮ ಮನೆಗೆ ಬಂದು 90 ಸಾವಿರ ಹಣ ತೆಗೆದುಕೊಂಡು ಹೋಗುವಂತೆ ತಿಳಿಸಿದರು. ನಾನು 1 ನೇ ಆರೋಪಿಗೆ ಮನೆಗೆ ಬರಲು ಸಾಧ್ಯವಿಲ್ಲ ತುಮಕೂರಿಗೆ ಬಂದರೆ ನಾನೂ ಸಹ ತುಮಕೂರಿಗೆ ಬರುತ್ತೇನೆ ಎಂದು ಹೇಳಿದ್ದೆ.

5. ದಿನಾಂಕಃ 25-2-2018 ರಂದು ಮದ್ಯಾಹ್ನ 3 ಗಂಟೆಗೆ ತುಮಕೂರಿನ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣಕ್ಕೆ ಬೆಂಗಳೂರಿನಿಂದ ಬಂದಿದ್ದೆ. ನಂತರ 1 ನೇ ಆರೋಪಿಗೆ ಪೋನ್ ಮಾಡಿದ್ದೆ. 1 ನೇ ಆರೋಪಿ ನನಗೆ ತುಮಕೂರಿನ ಭದ್ರಮ್ಮ ಛತ್ರದ ಹತ್ತಿರ ಬರುವಂತೆ ಹೇಳಿದರು. ನಾನು ಆಟೋದಲ್ಲಿ ಒಬ್ಬನೇ ಭದ್ರಮ್ಮ ಛತ್ರದ ಬಳಿ ಹೋದೆ. ನಾನು ಹೋದ ಸ್ಥಳದಲ್ಲಿ ಬುಲೆರೋ ಕಾರು ನಿಂತಿತ್ತು. ಆಗ ಸಮಯ 3-15 ಆಗಿತ್ತು. ಬೊಲೆರೋ ಕಾರಿನಲ್ಲಿ 1 ನೇ ಆರೋಪಿ ಗೌರಮ್ಮ, 3 ನೇ ಅರೋಪಿ ಅವಿನಾಶ, 2 ನೇ ಆರೋಪಿ ಪುನೀತ ಕಾರು ಚಾಲಕ ಕಾರಿನಲ್ಲಿ ಇದ್ದರು. ನನಗೆ ಕಾರಿನಲ್ಲಿ ಬಂದು ಕುಳಿತಿಕೊಳ್ಳುವಂತೆ 1 ಮತ್ತು 2 ನೇ ಆರೋಪಿಗಳು ಹೇಳಿದರು. ನಾನು ಕಾರಿನಲ್ಲಿ ಕುಳಿತುಕೊಂಡಿದ್ದೆ. 1, 2 ಮತ್ತು 3 ನೇ ಆರೋಪಿಗಳೊಂದಿಗೆ ಉಳಿದ ಮೂವರು ವ್ಯಕ್ತಿಗಳು ಕಾರಿನಲ್ಲಿ ಇದ್ದರು, 7 ನೇ ಆರೋಪಿ ಸುರೇಶ ಕಾರಿನಲ್ಲಿ ಇರಲಿಲ್ಲ. ಉಳಿದ ಕಾರಿನಲ್ಲಿದ್ದ ಮೂರು ಜನ ವ್ಯಕ್ತಿಗಳು ನೀನು ಸೈಲಾಂಟಾಗಿ ಕಾರಿನಲ್ಲಿ ಕುಳಿತುಕೊಳ್ಳಬೇಕು ಇಲ್ಲದಿದ್ದರೆ ಕೊಲೆ ಮಾಡಿ ಸಾಯಿಸುತ್ತೇವೆ

ಎಂದು ಹೇಳಿದರು. ಕಾರಿನ ಬಾಗಿಲುಗಳನ್ನು ಮುಚ್ಚಿದ್ದರು. ಭದ್ರಮ್ಮ ಛತ್ರ ದಿಂದ ಸುಮಾರು 10 ಕಿಮೀ ಪ್ರಯಾಣ ಮಾಡಿದ ನಂತರ ಕಾರಿನಲ್ಲಿದ್ದವರು ನನಗೆ ಕೈಗಳಿಂದ ಹೊಡೆದಿದ್ದರು. 3 ನೇ ಆರೋಪಿ ಅವಿನಾಶ ಮತ್ತು ಕಾರಿನಲ್ಲಿದ್ದ ಉಳಿದ 3 ಜನ ವ್ಯಕ್ತಿಗಳಲ್ಲಿ ಇಬ್ಬರು ಸೇರಿ ನನಗೆ ನೂಲಿನ ದಾರದ ರೀತಿಯ ಹಗ್ಗದಿಂದ ಕೈಗಳನ್ನು ಕಟ್ಟಿದ್ದರು. ನನ್ನ ಜೇಬಿನಲ್ಲಿದ್ದ 20 ಸಾವಿರ ಹಣ ಮತ್ತು ಒಂದು ಮೊಬೈಲನ್ನು ಕಿತ್ತುಕೊಂಡರು. ಕಾರಿನಲ್ಲಿದ್ದವರು ಎಲ್ಲರೂ ನನಗೆ ನಾವು ಲಿಂಗಾಯತರು ನೀವು ಬೋವಿ ಜನಾಂಗದವರು ನಾವು ಏನು ಬೇಕಾದರೂ ಮಾಡುತ್ತೇವೆ ನೀನುಸೂಳೆ ನನ್ನ ಮಗ, ಪರಿಶಿಷ್ಟ ಜಾತಿ ನನ್ನ ಮಕ್ಕಳು ನೀವು, ನೀನು ನಮ್ಮನ್ನು ಏನೂ ಮಾಡಲು ಸಾಧ್ಯವಿಲ್ಲ ಎಂದು ಜಾತಿ ನಿಂದನೆ ಮಾಡಿದರು. ನನಗೆ ಜಾತಿ ನಿಂದನೆ ಮಾಡಿದ್ದರಿಂದ ಮಾನಸಿಕವಾಗಿ ನೋವಾಯಿತು. ನನಗೆ 1 ನೇ ಆರೋಪಿಯ ಮನೆಯವರೆಗೆ ಕಾರಿನಲ್ಲಿ ಪ್ರಯಾಣ ಮಾಡುವಾಗ 3 ನೇ ಆರೋಪಿ, 2 ನೇ ಅರೋಪಿ ಮತ್ತು ಉಳಿದವರು ಮಾರಣಾಂತಿಕವಾಗಿ ಹಲ್ಲೆ ಮಾಡಿದರು. 1 ನೇ ಆರೋಪಿಯ ತೋಟದ ಮನೆಗೆ ಹೋಗುವ ವೇಳೆಗೆ ನನಗೆ ಮಾರಣಾಂತಿಕವಾಗಿ ಹಲ್ಲೆ ಮಾಡಿದ್ದರಿಂದ ದೈಹಿಕವಾಗಿ ನೋವಾಗಿತ್ತು.

6. ಅದೇ ದಿನ ಸಂಜೆ 5 ರಿಂದ 5-15 ರ ಸುಮಾರಿಗೆ 1 ನೇ ಆರೋಪಿಯ ಬಿಳಿಗೆರೆ ಪಾಳ್ಯದಲ್ಲಿದ್ದ ಮನೆಯ ಒಂದು ಕೋಣೆಯ ಒಳಗೆ ನನ್ನನ್ನು ಹಾಕಿ ಬಾಗಿಲು ಹಾಕಿದರು. ಆ ಕೋಣೆಯಲ್ಲಿ ತೆಂಗಿನ ಕಾಯಿ ತುಂಬಿಸುವ ಅಟ್ಟ ಇತ್ತು. ಬಾಗಿಲು ಹಾಕಿದ ನಂತರ 1 ನೇ ಆರೋಪಿ, 2 ನೇ ಅರೋಪಿ, 3 ನೇ ಆರೋಪಿ , 4 ನೇ ಅರೋಪಿ ಸ್ವಾಮಿ, 5 ನೇ ಆರೋಪಿ ಅನಿಲ, 6 ನೇ ಆರೋಪಿ ಶಿವ ನನ್ನನ್ನು ಕೂಡಿ ಹಾಕಿದ್ದ ಕೋಣೆಯ ಒಳಗೆ ರಾತ್ರಿ 10 ಗಂಟೆಗೆ

ಬಂದು ಕುಳಿತುಕೊಂಡರು. ಆಗ 7 ನೇ ಆರೋಪಿ ಸುರೇಶ ಇರಲಿಲ್ಲ. 1 ರಿಂದ 6 ಆರೋಪಿಗಳು ನನ್ನ ಸುತ್ತಲೂ ಕುಳಿತು ನೀನು 20 ಲಕ್ಷ ಹಣ ಕೊಟ್ಟರೆ ನಿನ್ನನ್ನು ಇಲ್ಲಿಂದ ಬಿಟ್ಟು ಕಳುಹಿಸುತ್ತೇವೆ ಇಲ್ಲವಾದರೆ ಕೊಲೆ ಮಾಡಿ ಸಾಯಿಸುತ್ತೇವೆ ಎಂದು ಹೇಳಿದರು. ನಾನು 1 ರಿಂದ 6 ಅರೋಪಿಗಳಿಗೆ ನನ್ನ ಬಳಿ ಅಷ್ಟೊಂದು ಹಣ ಇಲ್ಲ ಎಂದು ಹೇಳಿದೆ. ನಾನು ಅವರನ್ನು ನೀವು ನನಗೆ ಕೊಡಬೇಕಾದ 90 ಸಾವಿರ ಹಣ ಕೊಡುವುದು ಬೇಡ ನನ್ನನ್ನು ಬಿಟ್ಟು ಬಿಡಿ ಎಂದು ಹೇಳಿದರು. 2 ಮತ್ತು 3 ನೇ ಆರೋಪಿಗಳು ನೀನು ಮತ್ತೆ ಹಣ ಕೇಳುತ್ತೀಯಾ ಎಂದು ಚಪ್ಪಲಿಯಿಂದ ನನ್ನ ಕೆನ್ನೆಗೆ ಮತ್ತು ದೇಹದ ವಿವಿದ ಬಾಗಗಳಿಗೆ ಹೊಡೆದರು. ನನಗೆ ಹೊಡೆಯುವಾಗ ಅವರಿಬ್ಬರೂ ಬೋಳಿ ಮಗನೇ, ಸೂಳೆ ಮಗನೇ ನೀನು ಹಣ ಕೇಳುತ್ತೀಯಾ, ನಿನ್ನನ್ನು ಮನೆಯ ವರೆಗೆ ಕರೆತಂದಿರುವುದೇ ಹೆಚ್ಚು, ನೀನು ಬೋವಿ ಜನಾಂಗದವನು ಕೀಳು ಜಾತಿಯವನು ಅಲ್ಲೇ ರಸ್ತೆಯಲ್ಲಿ ನಿನ್ನನ್ನು ಸಾಯಿಸಬೇಕಾಗಿತ್ತು ನೀವು ಕೀಳು ಜಾತಿಯವರು ನಿಮ್ಮನ್ನು ಮನೆಗೆ ಬಿಟ್ಟುಕೊಳ್ಳುವುದಿಲ್ಲ ಎಂದು ಜಾತಿ ಬಗ್ಗೆ ಅವಮಾನ ಮಾಡಿದರು.

7. 1 ನೇ ಆರೋಪಿ ಗೌರಮ್ಮ ಬಂದು ಅವನ ಮುಖ ಏನು ನೋಡುತ್ತೀರಾ 20 ಲಕ್ಷ ಹಣ ಕೊಡದೇ ಇದ್ದರೆ ಕೊಲೆ ಮಾಡಿ ಸಾಯಿಸಿಬಿಡಿ ಎಂದು 2 ರಿಂದ 6 ಅರೋಪಿಗಳಿಗೆ ಪ್ರಚೋದನೆ ಮಾಡಿದರು. 1 ನೇ ಆರೋಪಿ ಒಂದು ಮಚ್ಚು ಮತ್ತು ಚಾಕುವನ್ನು 2 ಮತ್ತು 3 ನೇ ಆರೋಪಿಗಳಿಗೆ ಕೊಟ್ಟಿದ್ದರು. 20 ಲಕ್ಷ ಹಣ ತರಿಸುವುದಾದರೆ ನಿನ್ನನ್ನು ಹೊಡೆಯುವುದಿಲ್ಲ ಬಡಿಯುವುದಿಲ್ಲ ಕೊಲೆ ಮಾಡುವುದಿಲ್ಲ ಎಂದು ಹೇಳಿದರು. ನಾನು ಅಷ್ಟು ಹಣ ಇಲ್ಲ ಎಂದು ಹೇಳಿದೆ. 10 ಲಕ್ಷ ಹಣ ತರಿಸುತ್ತೇನೆ ಎಂದು ಹೇಳಿದೆ. 20 ಲಕ್ಷ ಹಣ

ಬೇಕೇ ಬೇಕು ಎಂದು 2 ನೇ ಆರೋಪಿ ಪುನೀತ ನನ್ನ ಬಲ ಕುತ್ತಿಗೆಯ ಮೇಲೆ ಚಾಕುವಿನಿಂದ ರಕ್ತಗಾಯ ಮಾಡಿದ. 3 ನೇ ಆರೋಪಿ ಅವಿನಾಶ ಆರೀತಿ ಮಾಡಬಾರದು ಎಂದು ಈ ರೀತಿ ಮಾಡಬೇಕು ಎಂದು 2 ನೇ ಅರೋಪಿ ಕೈಯಲ್ಲಿದ್ದ ಚಾಕುವನ್ನು ಪಡೆದು ನನ್ನ ಬಲ ಮತ್ತು ಎಡತೊಡೆಗೆ ಚುಚ್ಚಿದ. ನನಗೆ ರಕ್ತ ಬಂದಿದ್ದ ಕಾರಣ ನನ್ನನ್ನು ಸಾಯಿಸಬೇಡಿ ಬೆಳಿಗ್ಗೆ ಹಣ ತರಿಸುತ್ತೇನೆ ನನ್ನನ್ನು ಬಿಟ್ಟು ಬಿಡಿ ಎಂದು ಹೇಳಿದೆ. ಆಗ ನನಗೆ ರಕ್ತಸ್ರಾವ ಆಗುತ್ತಿತ್ತು. ಆ ದಿನ ರಾತ್ರಿ ನನಗೆ ಊಟ ಮತ್ತು ನೀರು ಕೊಡದೇ ಆರೋಪಿಗಳು ನನ್ನನ್ನು ಕೂಡಿ ಹಾಕಿದ್ದ ಕೋಣೆಯ ಬಾಗಿಲು ಹಾಕಿಕೊಂಡು ಹೋದರು.

8. ದಿನಾಂಕಃ 26-2-2018 ರಂದು ಬೆಳಿಗ್ಗೆ 9-30 ಗಂಟೆಗೆ ನನ್ನ ಮೊಬೈಲ್ ನಿಂದ ನನ್ನ ಪತ್ನಿ ಗಾಯತ್ರಿಗೆ 3 ನೇ ಅರೋಪಿ ಅವಿನಾಶ ಫೋನ್ ಮಾಡಿದರು. ನಿಮ್ಮ ಗಂಡ ನನಗೆ ದುಡ್ಡು ಕೊಡಬೇಕು 10 ಲಕ್ಷ ಹಣ ತಂದರೆ ನಿನ್ನ ಗಂಡನನ್ನು ಏನೂ ಮಾಡುವುದಿಲ್ಲ ಸಾಯಿಸುವುದಿಲ್ಲ ಕೊಲೆ ಮಾಡುವುದಿಲ್ಲ ಹಣ ಕೊಟ್ಟರೆ ಆತನನ್ನು ಬಿಟ್ಟು ಕಳುಹಿಸುತ್ತೇವೆ ಎಂದು 3 ನೇ ಆರೋಪಿ ನನ್ನ ಹೆಂಡತಿಗೆ ಹೇಳಿದರು. ದೂರು ಕೊಡುವುದಾಗಲಿ, ಯಾರನ್ನಾದರೂ ಕರೆದುಕೊಂಡು ಬಂದರೆ, ಪೊಲೀಸರನ್ನು ಕರೆತಂದಲ್ಲಿ ಅವರನ್ನೂ, ನಿನ್ನನ್ನೂ, ಮತ್ತು ನಿನ್ನ ಗಂಡನನ್ನು ಕೊಲೆ ಮಾಡಿ ಸಾಯಿಸುತ್ತೇವೆ ಎಂದು ಹೇಳಿದರು. ನನ್ನ ಪತ್ನಿ ಅವಿನಾಶನಿಗೆ ನನ್ನ ಯಜಮಾನರಿಗೆ ಫೋನ್ ಕೊಡುವಂತೆ ಹೇಳಿದರು. ನಾನು ನನ್ನ ಪತ್ನಿಗೆ ಅಳುತ್ತಾ 10 ಲಕ್ಷ ಜೊತೆ ಮಾಡಿ ತಂದು ನನ್ನನ್ನು ಬಿಡಿಸಿಕೊಂಡು ಹೋಗು ಇಲ್ಲವಾದರೆ ನನ್ನನ್ನು ಕೊಲೆ ಮಾಡುತ್ತಾರೆ ಎಂದು ತಿಳಿಸಿದೆ.

9. ನಂತರ ನನ್ನ ಪತ್ನಿ ಯಲಹಂಕ ಪೊಲೀಸ್ ಠಾಣೆಗೆ ನಾನು ಕಾಣೆಯಾದ ಬಗ್ಗೆ ದೂರು ನೀಡಿದ್ದರು. ನನ್ನ ಪತ್ನಿ ಮತ್ತು ಯಲಹಂಕ ಪೊಲೀಸರು ಹಣ ತರುತ್ತಿದ್ದೇವೆ ಎಂದು ಕೆ.ಬಿ.ಕ್ರಾಸ್ ಗೆ ಬಂದರು. ಕೆ.ಬಿ.ಕ್ರಾಸ್ ಗೆ ಬಂದು ನನ್ನ ಪತ್ನಿ ನನಗೆ ಪೋನ್ ಮಾಡಿದರು. 3 ನೇ ಆರೋಪಿ ಅವಿನಾಶ ಮತ್ತು 6 ನೇ ಆರೋಪಿ ಶಿವ ಕೆ.ಬಿ.ಕ್ರಾಸ್ ಬಳಿ ಹೋಗಿದ್ದರು. ಯಲಹಂಕ ಪೊಲೀಸರು ನಂತರ 3 ಮತ್ತು 6 ನೇ ಆರೋಪಿಗಳನ್ನು ವಶಕ್ಕೆ ಪಡೆದಿದ್ದರು. ಯಲಹಂಕ ಪೊಲೀಸರು ಮತ್ತು ಕೆ.ಬಿ.ಕ್ರಾಸ್ ನ ಪೊಲೀಸರು ನನ್ನ ಪತ್ನಿಯೊಂದಿಗೆ 1 ನೇ ಆರೋಪಿಯ ತೋಟದ ಮನೆಗೆ ಸಂಜೆ 6-30 ರ ಸಮಯಕ್ಕೆ ಬಂದಿದ್ದರು. ನನ್ನನ್ನು 1 ನೇ ಆರೋಪಿಯ ಮನೆಯಿಂದ ಬಿಡಿಸಿ ಕೆ.ಬಿ.ಕ್ರಾಸ್ ಪೊಲೀಸ್ ಠಾಣೆಗೆ ಕರೆದುಕೊಂಡು ಹೋದರು. ಪೊಲೀಸರು ನನಗೆ ಮೊದಲು ಪ್ರಥಮ ಚಿಕಿತ್ಸೆ ನೀಡಿದರು.

10. ನಾನು ಪೊಲೀಸ್ ಠಾಣೆಯಲ್ಲಿ ಈ ಬಗ್ಗೆ 6 ರಿಂದ 6-15 ರ ಸಮಯದಲ್ಲಿ ದೂರು ಕೊಟ್ಟಿದ್ದೆ. ಸಾಕ್ಷಿ ದೂರು ಮತ್ತು ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ.2 ಮತ್ತು ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಕಾರಿನಲ್ಲಿದ್ದ 1 ರಿಂದ 3 ಆರೋಪಿಗಳು ಮತ್ತು ಅವರ ಜೊತೆಯಲ್ಲಿದ್ದ ಉಳಿದ ಮೂವರು ಆರೋಪಿಗಳನ್ನು ನೋಡಿದರೆ ಗುರುತಿಸಬಲ್ಲೆ. ನಾನು 7 ನೇ ಆರೋಪಿ ಸುರೇಶನನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನ್ಯಾಯಾಲಯದ ಮುಂದೆ ಹಾಜರಿರುವ 7 ನೇ ಆರೋಪಿ ಸುರೇಶ, 3 ನೇ ಅರೋಪಿ ಅವಿನಾಶ, 6 ನೇ ಆರೋಪಿ ಶಿವ, 2 ನೇ ಅರೋಪಿ ಪುನೀತ, 5 ನೇ ಆರೋಪಿ ಅನಿಲ ರವರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

11. ನಾನು 1 ನೇ ಅರೋಪಿ ಗೌರಮ್ಮ ಮತ್ತು 4 ನೇ ಅರೋಪಿ ಸ್ವಾಮಿ ರವರನ್ನು ನೋಡಿದರೆ ಗುರುತಿಸಬಲ್ಲೆ. 1 ಮತ್ತು 4 ನೇ ಅರೋಪಿಗಳು ಗೈರು ಹಾಜರಾಗಿದ್ದು ಅರೋಪಿ ಪರ ವಕೀಲರು ಹಾಜರಾತಿಯಿಂದ ವಿನಾಯತಿ ಕೋರಿ ಅರ್ಜಿ ಸಲ್ಲಿಸಿದ್ದು ಅರೋಪಿಗಳನ್ನು ಗುರುತಿಸುವ ಬಗ್ಗೆ ತಕರಾರು ಇರುತ್ತದೆ ಎಂದು ನುಡಿದಿರುತ್ತಾರೆ.

12. ನಾನು ದೂರು ಕೊಟ್ಟ ನಂತರ ಪೊಲೀಸರು 27-2-2018 ರಂದು 1 ನೇ ಆರೋಪಿಯ ಮನೆಯಲ್ಲಿ ಬೆಳಿಗ್ಗೆ 9 ರಿಂದ 10 ಗಂಟೆಯವರೆಗೆ ಸಾಕ್ಷಿದಾರರ ಸಮಕ್ಷಮ ಮಹಜರ್ ಮಾಡಿದರು. ನಾನು ಮಹಜರ್ ಗೆ ಸಹಿ ಮಾಡಿದ್ದೆನೆ. ಸಾಕ್ಷಿ ಮಹಜರ್ ಮತ್ತು ಸಹಿಯನ್ನು ನೋಡಿ ಗುರುತಿಸಿದ್ದು ಮಹಜರ್ ಈಗಾಗಲೇ ನಿಪಿ.1 ಎಂದು ಗುರುತಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ನಾನೇ ಪೊಲೀಸರಿಗೆ ಮಹಜರ್ ವೇಳೆ ಸ್ಥಳ ತೋರಿಸಿದ್ದೆ. ನನಗೆ ಚುಚ್ಚಿದ ಚಾಕುವನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಚಾಕುವನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ 1 ಮತ್ತು 4 ನೇ ಅರೋಪಿಗಳ ಗುರುತಿಸುವಿಕೆಗಾಗಿ ಮತ್ತು ಮುಂದುವರಿದ ಮುಖ್ಯ ವಿಚಾರಣೆಗಾಗಿ ಅಬಿಯೋಜಕರು ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

3 ನೇಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.